StudentBounty.com

0201/

**Second Semester of Three Year LL.B./Fifth Semester of Five Year B.A.LL.B./B.B.A.LL.B. Examination, June/July 2012**

**CONTRACT – II (Course – I)**

Duration : 3 Hours Max. Marks : 100

**Instructions** : 1. Answer all the **5** Questions.

2. **One** essay type and **one** short note question or problem from **each unit** have to be attempted, which is referred as part (**a**) and (**b**) in all units.

3. Figures to the **right** indicate marks.

4. Answers should be written either in **English** or in **Kannada completely**.

## UNIT – I

Q. No. 1. (a) Define contract of Guarantee. Explain the rights of surety. Marks : 15

ಜಾಮೀನುದಾರಿಕೆ ಕರಾರನ್ನು ವ್ಯಾಖ್ಯಾನಿಸಿ. ಜಾಮೀನುದಾರನ ಹಕ್ಕುಗಳನ್ನು ವಿವರಿಸಿ.

OR/**ಅಥವಾ**

Define Bailment and Pledge. When is a pledge created by non owners valid ?

ನಿಕ್ಷೇಪ ಹಾಗೂ ಒತ್ತೆಗಳನ್ನು ವ್ಯಾಖ್ಯಾನಿಸಿ. ಮಾಲೀಕರಲ್ಲದವರಿಂದ ಒತ್ತೆಯು ಯಾವಾಗ ಕ್ರಮಬದ್ಧವಾಗುತ್ತದೆ ?

(b) 'A' stands as a surety for the good conduct of 'B' who is employed in a Bank. 'B' misappropriates some moneys. The Bank excuses him without informing 'A' of 'B' is misconduct.

**P.T.O.**

www.StudentBounty.com

StudentBounty.com

'B' again misappropriates Rs. 50,000. The Bank files a suit against 'A' on the strength of the Guarantee. Decide giving reasons. Marks : 5

ಒಂದು ಬ್ಯಾಂಕು 'ಬಿ' ಯನ್ನು ನೇಮಕ ಮಾಡಿಕೊಂಡಿದ್ದು 'ಎ' ಯು 'ಬಿ'ಯ ಒಳ್ಳೆಯ ನಡತೆಯ ಬಗ್ಗೆ ಬ್ಯಾಂಕಿಗೆ ಜಾಮೀನುದಾರನಾಗಿರುತ್ತಾನೆ. 'ಬಿ'ಯು ಬ್ಯಾಂಕಿನ ಹಣವನ್ನು ದುರುಪಯೋಗಿಸಿದಾಗ 'ಎ' ಗೆ ತಿಳಿಸದೆಯೇ ಬ್ಯಾಂಕು 'ಬಿ'ಯನ್ನು ಕ್ಷಮಿಸುತ್ತದೆ. 'ಬಿ' ಯು ಮತ್ತೆ ರೂ. 50,000 ಗಳನ್ನು ದುರುಪಯೋಗಿಸಿದಾಗ 'ಎ' ಯ ವಿರುದ್ಧ ರೂ. 50,000 ಗಳನ್ನು ವಸೂಲಿ ಮಾಡಲು ಬ್ಯಾಂಕು ದಾವೆ ಹೂಡುತ್ತದೆ. ನಿಮ್ಮ ಕಾರಣಗಳೊಂದಿಗೆ ತೀರ್ಮಾನಿಸಿ.

OR/**ಅಥವಾ**

A white tiger was entrusted by 'B' to the Railway for carriage. The cage broke by the jolts received during the journey and the tiger escaped. It killed a bullock belonging to 'C' and was almost immediately crushed by the engine. Discuss the liability of the Railway administration to 'B' and 'C'.

ಒಂದು ಬಿಳಿಯ ಹುಲಿಯನ್ನು ಸಾಗಣೆ ಮಾಡಲು 'ಬಿ'ಯು ರೈಲ್ವೆ ಆಡಳಿತಕ್ಕೆ ಒಪ್ಪಿಸುತ್ತಾನೆ. ಪ್ರಯಾಣ ಮಾಡುವಾಗ ತೀವ್ರ ಕುಲುಕಾಟದಿಂದ ಬೋನು ಮುರಿದು ಹುಲಿಯು ತಪ್ಪಿಸಿಕೊಳ್ಳುತ್ತದೆ. ಅದು 'ಬಿ'ಗೆ ಸಂಬಂಧಿಸಿದ ಒಂದು ಎತ್ತನ್ನು ಕೊಂದು ರೈಲಿನ ಎಂಜಿನ್‌ನಿಂದ ತಾನೇ ಜಜ್ಜಿ ಕೊಲ್ಲಲ್ಪಡುತ್ತದೆ. 'ಬಿ' ಮತ್ತು 'ಸಿ'ಗಳಿಗೆ ರೈಲ್ವೆ ಆಡಳಿತದ ಹೊಣೆಗಾರಿಕೆಯನ್ನು ಚರ್ಚಿಸಿ.

## UNIT – II

Q. No. 2. (a) What is a contract of agency ? What are the different modes of creation of agency ? Marks : 15

ಕಾರ್ಯಭಾರ ಕರಾರು ಎಂದರೇನು ? ಕಾರ್ಯಭಾರವನ್ನು ಸೃಷ್ಟಿಸುವ ವಿವಿಧ ರೀತಿಗಳು ಯಾವುವು ?

OR/**ಅಥವಾ**

www.StudentBounty.com

Explain the circumstances in which a contract of agency is terminated.

ಕಾರ್ಯಭಾರದ ಕರಾರು ಅಂತ್ಯಗೊಳ್ಳುವ ಸಂದರ್ಭಗಳನ್ನು ವಿವರಿಸಿ.

(b) 'P' gives authority to 'A' to sell 'P' s land and to pay himself, out of the proceeds, the debt due to him from 'P'. Subsequently 'P' revokes the authority given to 'A'. Advise 'P'. Marks : 5

'ಪಿ'ಯು 'ಎ'ಗೆ ತನ್ನ ಜಮೀನನ್ನು ಮಾರಿ ಅದರಿಂದ ಬರುವ ಹಣವನ್ನು 'ಎ'ಗೆ ಪಾವತಿಸಬೇಕಾದ 'ಸಾಲ'ಕ್ಕೆ ಜಮಾ ಮಾಡಿಕೊಳ್ಳುವಂತೆ ಅಧಿಕಾರ ಕೊಡುತ್ತಾನೆ. ಆನಂತರ 'ಪಿ'ಯು 'ಎ'ಗೆ ಕೊಟ್ಟ ಅಧಿಕಾರವನ್ನು ರದ್ದುಗೊಳಿಸುತ್ತಾನೆ. 'ಪಿ'ಗೆ ಸಲಹೆ ನೀಡಿ.

OR/**ಅಥವಾ**

'D' a carrier discovers that a consignment of tomatoes owned by 'E' has deteriorated badly before the destination is reached. He, therefore, sells the consignment for about a third of the market price. 'E' sues 'D' for damages. Decide.

'ಡಿ'ಯು ಒಬ್ಬ ಸರಕು ಸಾಗಣೆ ವಾಹಕನಾಗಿರುತ್ತಾನೆ. ಟೊಮ್ಯಾಟೊ ಮಾಲೀಕನಾದ 'ಇ'ಯು ತನ್ನ ಟೊಮ್ಯಾಟೊಗಳನ್ನು ಸಾಗಿಸಲು ವಾಹಕನಿಗೆ ವಹಿಸಿರುತ್ತಾನೆ. ನಿಗದಿಪಡಿಸಿದ ನಿಲ್ದಾಣವನ್ನು ತಲುಪುವ ಮೊದಲೇ ಟೊಮ್ಯಾಟೊಗಳು ಬಹಳವಾಗಿ ಹಾಳಾಗಿದ್ದುದರಿಂದ 'ಡಿ' ಯು ಟೊಮ್ಯಾಟೊಗಳನ್ನು ಮಾರುಕಟ್ಟೆಯ ಬೆಲೆಗಿಂತ ಮೂರನೆ ಒಂದರಷ್ಟು ಕಡಿಮೆ ಬೆಲೆಗೆ ಮಾರುತ್ತಾನೆ. 'ಇ'ಯು 'ಡಿ'ಯ ವಿರುದ್ಧ ನಷ್ಟ ಪರಿಹಾರಕ್ಕಾಗಿ ದಾವೆ ಹೂಡುತ್ತಾನೆ. 'ಡಿ'ಯು ನಷ್ಟ ಪರಿಹಾರಕ್ಕೆ ಹೊಣೆಗಾರನಾಗುತ್ತಾನೆಯೇ ?

StudentBounty.com

www.StudentBounty.com

StudentBounty.com

## UNIT – III

Q. No. 3. (a) Can a minor be a partner in a partnership firm ? Explain the legal status of a minor partner in a partnership firm. Marks : 15

ಒಬ್ಬ ಅಪ್ರಾಪ್ತ ವಯಸ್ಕನು ಪಾಲುದಾರಿಕೆಯ ಸಂಸ್ಥೆಯಲ್ಲಿ ಪಾಲುದಾರನಾಗಬಲ್ಲನೇ ? ಒಂದು ಪಾಲುದಾರಿಕೆ ಸಂಸ್ಥೆಯಲ್ಲಿ ಅಪ್ರಾಪ್ತ ವಯಸ್ಕ ಪಾಲುದಾರನ ಸ್ಥಾನಮಾನವನ್ನು ವಿವರಿಸಿ.

OR/ಅಥವಾ

What is meant by dissolution of firm ? Explain the different grounds on which a firm is dissolved by the order of a court.

ಪಾಲುದಾರಿಕೆ ಸಂಸ್ಥೆಯ 'ವಿಘಟನೆ' ಎಂದರೇನು ? ನ್ಯಾಯಾಲಯದ ಆದೇಶದ ಮೇರೆಗೆ ಪಾಲುದಾರಿಕೆ ಸಂಸ್ಥೆಯನ್ನು ವಿಘಟಿಸುವ ವಿವಿಧ ಆಧಾರಗಳನ್ನು ವಿವರಿಸಿ.

(b) A, B, C and Co. is a newly constituted firm and commences business without registration. 'D' having been indebted to the firm in a sum of Rs. 1 Lakh defaults to repay the debt. The firm files a suit against him for the recovery of the said sum and immediately thereafter gets itself registered. Would the firm succeed ? Would your answer differ if 'D' being a creditor files a suit against the unregistered firm for the recovery of a loan ? Marks : 5

'ಎ', 'ಬಿ', 'ಸಿ' ಮತ್ತು ಕಂಪನಿಯು ಹೊಸದಾಗಿ ರಚಿಸಲಾಗಿದ್ದು ನೋಂದಾವಣೆ ಇಲ್ಲದೆಯೇ ವ್ಯಾಪಾರವನ್ನು ಪ್ರಾರಂಭಿಸುತ್ತದೆ. 'ಡಿ'ಯು ಸಂಸ್ಥೆಯಿಂದ ರೂ. 1 ಲಕ್ಷ ಸಾಲ ಪಡೆದು ಹಿಂದಿರುಗಿಸದೆ ಸುಸ್ತಿಯಾಗಿರುತ್ತಾನೆ. ಸಂಸ್ಥೆಯು 'ಡಿ'ಯ ವಿರುದ್ಧ ದಾವೆ ಹೂಡಿ ತಕ್ಷಣವೇ ಆನಂತರ ನೋಂದಾಯಿಸಿಕೊಳ್ಳುತ್ತದೆ. ಸಂಸ್ಥೆಯು ಗೆಲ್ಲಬಲ್ಲದೇ ? 'ಡಿ'ಯು ಸಾಲಗಾರನಾಗಿ ನೋಂದಾವಣೆಯಾಗದ ಸಂಸ್ಥೆಯ ವಿರುದ್ಧ ದಾವೆ ಹೂಡಿ ಸಾಲ ವಸೂಲಿ ಮಾಡಬಹುದೇ ?

OR/ಅಥವಾ

www.StudentBounty.com

Three Bus companies each having ten partners combine by agreement into one firm. The firm enters into a number of contracts. Can these contracts by the new firm be enforced by or against the firm ?

ಒಂದೊಂದು ಬಸ್ ಕಂಪನಿಯಲ್ಲಿ 10 ಮಂದಿ ಪಾಲುದಾರರಿರುವ ಮೂರು ಕಂಪನಿಗಳು ಒಟ್ಟುಗೂಡಿ ಒಂದು ಪಾಲುದಾರಿಕೆ ಸಂಸ್ಥೆಯನ್ನು ಪ್ರಾರಂಭಿಸುತ್ತವೆ. ಆ ಪಾಲುದಾರಿಕೆ ಸಂಸ್ಥೆಯು ಹಲವಾರು ಕರಾರುಗಳನ್ನು ಮಾಡಿಕೊಳ್ಳುತ್ತದೆ. ಆ ಕರಾರುಗಳನ್ನು ಹೊಸ ಪಾಲುದಾರಿಕೆ ಸಂಸ್ಥೆಯ ಪರವಾಗಿ ಅಥವಾ ವಿರುದ್ಧ ಜಾರಿಗೊಳಿಸಲು ಸಾಧ್ಯವೇ ?

**UNIT – IV**

Q. No. 4. (a) Define 'condition and warranty' in a contract of sale of goods.

Explain the conditions implied in a contract of sale of goods by description.

When a condition is to be treated as warranty ? Marks : 15

ಸರಕು ವಿಕ್ರಯ ಕರಾರಿನಲ್ಲಿ 'ಷರತ್ತು' ಮತ್ತು 'ಭರವಸೆ'ಗಳನ್ನು ವ್ಯಾಖ್ಯಾನಿಸಿ.

ಒಂದು ವರ್ಣನಾಯುಕ್ತ ಸರಕು ವಿಕ್ರಯ ಕರಾರಿನಲ್ಲಿ ಯಾವ ಷರತ್ತುಗಳು ಅವ್ಯಕ್ತವಾಗಿರುತ್ತದೆ ಎಂಬುದನ್ನು ವಿವರಿಸಿ.

ಷರತ್ತನ್ನು ಯಾವಾಗ ಭರವಸೆ ಎಂದು ಪರಿಗಣಿಸಬೇಕಾಗುವುದು ?

OR/**ಅಥವಾ**

Who is an unpaid seller ? Discuss the rights of unpaid seller as against the goods.

ಸಂದಾಯವಾಗದ ಮಾರಾಟಗಾರನೆಂದರೆ ಯಾರು ? ಸಂದಾಯವಾಗದ ಮಾರಾಟಗಾರನಿಗೆ ಸರಕುಗಳ ವಿರುದ್ಧ ಇರುವ ಹಕ್ಕುಗಳನ್ನು ವಿಶದೀಕರಿಸಿರಿ.

StudentBounty.com

www.StudentBounty.com

StudentBounty.com

(b) 'A' buys a diamond necklace from 'B', pays for it, but leaves it in the possession of 'B'. 'B' them sells the same necklace to 'C' for a higher price. Does 'C' acquire a better title to the necklace ? Can 'A' file a suit against 'C' for recovery of the necklace ? Marks : 5

'ಎ'ಯು 'ಬಿ'ಯಿಂದ ಒಂದು ವಜ್ರದ ಕಂಠೀಹಾರವನ್ನು ಕೊಂಡು, ಅದರ ಬೆಲೆಯನ್ನು ಪಾವತಿಸಿ, ಅದನ್ನು 'ಬಿ'ಯ ಸ್ವಾಧೀನದಲ್ಲಿಯೇ ಬಿಡುತ್ತಾನೆ. 'ಬಿ'ಯು ಆ ವಜ್ರದ ಕಂಠೀಹಾರವನ್ನು 'ಸಿ' ಗೆ ಇನ್ನೂ ಹೆಚ್ಚಿನ ಬೆಲೆಗೆ ಮಾರುತ್ತಾನೆ. 'ಸಿ'ಯು ಆ ಕಂಠೀಹಾರಕ್ಕೆ ಉತ್ತಮ ಸ್ವಾಮ್ಯವನ್ನು ಪಡೆಯುತ್ತಾನೆಯೇ ? 'ಎ'ಯು 'ಸಿ'ಯ ವಿರುದ್ಧ ಕಂಠೀಹಾರದ ವಸೂಲಿಗೆ ದಾವೆಹೂಡಬಲ್ಲನೇ ?

OR/**ಅಥವಾ**

A dentist agreed to supply a set of artificial teeth and fit it into the mouth of a patient for Rs. 5,000. All the material required was wholly found by the Dentist. The Dentist delivered the dentures and received Rs. 5,000 from the Patient. Decide if the transaction is a contract for sale of goods.

ಒಬ್ಬ ದಂತವೈದ್ಯನು ಒಬ್ಬ ರೋಗಿಗೆ ಒಂದು ಜೊತೆ ಕೃತಕ ಹಲ್ಲುಗಳನ್ನು ಸರಬರಾಜು ಮಾಡಿ, ರೋಗಿಯ ಬಾಯಿಗೆ ಹೊಂದಿಸಲು ಒಪ್ಪಿರುತ್ತಾನೆ. ರೋಗಿಯು ರೂ. 5,000 ಗಳನ್ನು ಪಾವತಿಸಲು ಒಪ್ಪಿರುತ್ತಾನೆ. ಅದಕ್ಕೆ ಬೇಕಾಗುವ ಎಲ್ಲಾ ಸಾಮಗ್ರಿಗಳನ್ನು ವೈದ್ಯನೇ ಒದಗಿಸಿಕೊಳ್ಳುತ್ತಾನೆ. ದಂತವೈದ್ಯನು ಕೃತಕ ಹಲ್ಲುಗಳನ್ನು ಬಟವಾಡೆ ಮಾಡಿ ರೂ. 5,000 ಗಳನ್ನು ಪಡೆಯುತ್ತಾನೆ. ಈ ವ್ಯವಹಾರವು ಸರಕು ವಿಕ್ರಯ ಕರಾರೇ ಅಥವಾ ಅಲ್ಲವೇ ಎಂಬುದನ್ನು ತೀರ್ಮಾನಿಸಿ.

## UNIT – V

Q. No. 5. (a) Discuss the rights of on unpaid seller towards the goods. Marks : 15

ಸರಕುಗಳ ಸಂಬಂಧದಲ್ಲಿ ಹಣ ಸಂದಾಯವಾಗದ ಮಾರಾಟಗಾರನಿಗೆ ಇರುವ ಹಕ್ಕುಗಳನ್ನು ಚರ್ಚಿಸಿ.

OR/**ಅಥವಾ**

www.StudentBounty.com

StudentBounty.com

"No one can transfer a better title than he himself has" – Discuss the statement.

''ಯಾವುದೇ ವ್ಯಕ್ತಿಯು ತನ್ನಲ್ಲಿರುವ ಮಾಲಿಕತ್ವಕ್ಕಿಂತ ಹೆಚ್ಚಿನದನ್ನು ಹಸ್ತಾಂತರ ಮಾಡಲಾರ'' – ಈ ಹೇಳಿಕೆಯನ್ನು ಚರ್ಚಿಸಿ.

(b) "A" agrees to supply 100 Ton of sugar to 'B', "A" despatches 120 Tons. "B" refuses to receive sugar that he has supplied excess. Advise "A". Marks : 5

''ಅ''ನು 100 ಟನ್ ಸಕ್ಕರೆ ''ಬ''ನಿಗೆ ಸರಬರಾಜು ಮಾಡಲು ಒಪ್ಪಿರುತ್ತಾನೆ. ''ಅ''ನು 'ಬ''ನಿಗೆ 120 ಟನ್ ಸಕ್ಕರೆ ಸರಬರಾಜು ಮಾಡುತ್ತಾನೆ. ಹೆಚ್ಚಿನ ಸಕ್ಕರೆಯನ್ನು ಸರಬರಾಜು ಮಾಡಿದ ಕಾರಣದಿಂದ ''ಬ''ನು ಆ ಸಕ್ಕರೆಯನ್ನು ಸ್ವೀಕರಿಸಲು ನಿರಾಕರಿಸುತ್ತಾನೆ. ''ಅ''ನಿಗೆ ಸಲಹೆ ನೀಡಿ.

OR/**ಅಥವಾ**

"A" asks "B" a chemist, to give him hot water bottle. Subsequently, the bottle bursts and injures "A's" wife. Is "B" walk to refund the money paid by "A" ?

''ಎ''ಯು ಬಿಸಿ ನೀರು ತುಂಬಿಡಲು ಒಂದು ಬಾಟಲಿಯನ್ನು ''ಬಿ'' ಔಷಧ ವ್ಯಾಪಾರಿಯಲ್ಲಿ ಕೇಳುತ್ತಾನೆ. ತದನಂತರ ಬಾಟಲಿ ಒಡೆದು ''ಎ''ನ ಹೆಂಡತಿಗೆ ಗಾಯವಾಗುತ್ತದೆ. ''ಬಿ''ನು ''ಎ''ಗೆ ಹಣ ಮರಳಿ ಕೊಡಲು ಬಾಧ್ಯನಾಗಿದ್ದಾನೆಯೇ ?

www.StudentBounty.com